ಏನೂ ತೊಂದರೆಯಿರಲಿಲ್ಲ, ಹಠಾತ್ ಅವನು...

ಎಷ್ಟೇ ಹೆದರಿಕೆಯಿದ್ದರೂ ಆಫೀಸಿಗೆ ಹೋಗದೆ ಇರಬಹುದೇ? ಎಂಥ ಕಾಯಿಲೆ ರೋಗಿ ಮನೆಯಲ್ಲಿದ್ದರೂ ಅವರನ್ನ ಬಿಟ್ಟು ಯಾರೇ ಆದರೂ ಕೆಲಸಕ್ಕೆ ಹೋಗಲೇಬೇಕು. ಬಾಗಿಲಿನ ಹೊರಗೆ ಯಾರೋ ಅಪರಿಚಿತ, ಅನಾಮಧೇಯ ಭಿಕಾರಿ ಸುತ್ತಾಡ್ತಾ ಇದ್ದಾನೆ ಅಂತ ಆಫೀಸಿಗೆ ಹೋಗದೆ ಮನೆಯಲ್ಲೇ ಇರೋಕಾಗುತ್ಯೆ? ಹಾಗೆ ಅಂದುಕೊಳ್ಳೋದೆ ಹಾಸ್ಯಾಸ್ಪದ.

ಸಾಧನ್ ಬಾಬು ಅವರ ಕಾರಿನ ಹಾರ್ನ್ ಕೇಳಿ ಅಸಿತ್ ಸುಲತಾಗೆ ಮತ್ತೊಮ್ಮೆ ಎಚ್ಚರಿಕೆ ನೀಡಿ ಬ್ಯಾಗ್ ತಗೊಂಡು ಹೊರಟ.

ಸಾಧನ್ ಬಾಬು ಆ ಕಡೆ ಈ ಕಡೆ ನೋಡಿ ಕೇಳಿದರು, "ಅವನು ಏನೂ ತೊಂದರೆ ಕೊಟ್ಟಿಲ್ಲ ತಾನೇ?"

"ಇಲ್ಲ, ಏನೂ ಇಲ್ಲ..." ಹಿಂಜರಿಕೆಯ ಧ್ವನಿಯಲ್ಲಿ ನುಡಿದ ಅಸಿತ್, "ಆದರೆ ಪೋಸ್ಟ್‌ಮ್ಯಾನ್ ಹತ್ತಿರ ನಮ್ಮನೆ ವಿಳಾಸ ಕೇಳುತ್ತಿದ್ದನಂತೆ".

"ಹೌದಾ!? ಏನೋ ಇದೆ ರಾಯ್ ಚೌಧುರಿ, ಹುಷಾರಾಗಿರು. ಅಥವಾ... ಪೊಲೀಸ್ ಸ್ಟೇಷನ್‌ಗೆ ಒಂದ್ಸಲ ಸುದ್ದಿ ಮುಟ್ಟಿಸಿದ್ದರೆ ಒಳ್ಳೇದಾಗ್ತಿತ್ತೇನೋ."

"ಹುಂ... ಆದರೆ ರಾತ್ರಿ..." ರಾತ್ರಿಯಂತೂ ಹೊರಗೇ ಬರಲಿಲ್ಲ ಅಂತ ಅಸಿತ್ ಹೇಳಲಿಲ್ಲ.

ಸ್ವಲ್ಪ ದೂರ ಹೋದ ಮೇಲೆ ವಿಶ್ವಾಸ್ ಬಾಬುವನ್ನು ಹತ್ತಿಸಿಕೊಂಡರು. ಇವನು ಮತ್ತೊಬ್ಬ ಪುಣ್ಯವಂತ! ಸಾಧನ್ ಬಾಬು ಅವರ ಕಾರಿನಲ್ಲಿ ಲಿಫ್ಟ್ ಪಡೆಯುವವನು!

ವಿಶ್ವಾಸ್ ಬಾಬುವನ್ನು ಹತ್ತಿಸಿಕೊಂಡ ನಂತರ ವಯಸ್ಸಿಗೆ ತಕ್ಕ ಅನುಭವದಿಂದ ಸಾಧನ್ ಬಾಬು ಹೇಳಿದರು, "ಕಾಲ ಕೆಟ್ಹೋಗಿದೆ ವಿಶ್ವಾಸ್, ಹುಷಾರಾಗಿರು. ಸುಮಾರು ದಿನದಿಂದ ನೋಡ್ತಾ ಇದ್ದೀನಿ ರಾಯ್ ಚೌಧುರಿಯವರ ಮನೆ ಮೇಲೆ ಯಾವನೋ ಕಣ್ಣಿಟ್ಟಿದ್ದಾನೆ. ನಿನ್ನೆ ಪೋಸ್ಟ್‌ಮ್ಯಾನ್ ಹತ್ತಿರ ಮನೆ ವಿಳಾಸ ಕೇಳುತ್ತಿದ್ದನಂತೆ".

"ವಿಳಾಸ ಕೇಳುತ್ತಿದ್ದನಾ?" ವಿಶ್ವಾಸ್ ಸಂದೇಹದ ಧ್ವನಿಯಲ್ಲಿ ಕೇಳಿ, ಮುಂದುವರಿದು, "ಎಂಥ ವ್ಯಕ್ತಿ? ನೋಡೋಕೆ ಹೇಗಿದಾನೆ ಹೇಳು? ಅವನ ಮುಖ ಮೂತಿ?"

ಅಸಿತ್ ಸಂಕ್ಷಿಪ್ತವಾಗಿ ವರ್ಣಿಸಿದ; ಪೂರ್ತಿ ಮುಗಿಯುವ ಮುನ್ನವೇ ಮಧ್ಯೆ ಬಾಯಿಹಾಕಿ ವಿಶ್ವಾಸ್ ಮಾತಾಡಿದ, "ಅರೆ, ಈ ತರಹದ ವ್ಯಕ್ತಿ ನಮ್ಮನೆ ಹತ್ತಿರಾನೂ ಸುತ್ತಾಡ್ತಾ ಇದ್ದ! ಅದೇ ಕೆಲಸ, ವಿಳಾಸ ಹುಡುಕೋದು. ಹೌದು, ಹೌದು, ನೀನು ಹೇಳುತ್ತಿರೋದು ಅವನೇ, ಅವನೇ!"

ಈ ಮಾತು ಕೇಳಿ ಸಾಧನ್ ಬಾಬು ಸ್ವಲ್ಪ ಬೇಸರಗೊಂಡರು, "ಹೌದಾ? ಮೊದಲೇ ಯಾಕೆ ಹೇಳಲಿಲ್ಲ?"

ವಿಶ್ವಾಸ್‌ಗೂ ಸ್ವಲ್ಪ ಬೇಜಾರಾಯಿತು. ಯಾಕೆಂದರೆ ಸಾಧನ್ ಬಾಬು ತರಹದ ಒಬ್ಬ ಹಿತೈಷಿ ಮುಂದೆ ಅವರು ಯಾವುದೇ ವಿಷಯವನ್ನು ಮುಚ್ಚಿಡುವುದಿಲ್ಲ. ಆದರೆ, ಏನು ನಡೆದಿತ್ತೋ ಅದು ಅವನ ಕಣ್ಣ ಮುಂದೆ ನಡೆದಿರಲಿಲ್ಲ. ಆಫೀಸಿನ ಕೆಲಸದ ಮೇಲೆ ಧಾನಬಾದ್‌ಗೆ ಹೋಗಿದ್ದಾಗ ನಡೆದಿತ್ತು. ಅದನ್ನೇ ಹೇಳಿದ ವಿಶ್ವಾಸ್, "ನಾನು, ಧಾನಬಾದ್‌ಗೆ ಹೋಗಿದ್ದಾಗ ನಡೆದಿದ್ದು, ವಾಪಸು ಬಂದ ಮೇಲೆ ಗೊತ್ತಾಗಿದ್ದು. ಈ ತರದವನು ನಮ್ಮನೆ ಹತ್ತಿರಾನೂ ಸುತ್ತುತ್ತಾ ಇದ್ದನಂತೆ. ಯಾರಾದರೂ ಮನೆಯೊಳಗೆ ಹೋದರೆ, ಬಂದರೆ, 'ಈ ಮನೆ ವಿಳಾಸ ಏನು ಬಾಬು? ನಂಗೊಸಿ ಈ ಮನೆ ವಿಳಾಸ ಬೇಕಾಗಿತ್ತು' ಅಂತ ಕೇಳುತಿದ್ದನಂತೆ. ನಾನಂತೂ ಯಾರೋ ತಲೆಕೆಟ್ಟವನಿರಬೇಕು ಅಂತ ನಿರ್ಲಕ್ಷ್ಯ ಮಾಡಿದ್ದೆ."

ಸಾಧನ್ ಬಾಬು ಗಂಭೀರವಾಗಿ ಹೇಳಿದರು, "ನೀವೆಲ್ಲ ಹರೆಯದವರು, ಬಿಸಿರಕ್ತ. ಇಂಥದ್ದೆಲ್ಲ